# ಮುಖವಾಡ

■ ಸಿರಿಮೂರ್ತಿ ಕಾಸರವಳ್ಳಿ



ಸಮಯ ಐದು ಗಂಟೆಯನ್ನು ಸೂಚಿಸುತ್ತಿತ್ತು. ಒಬ್ಬೊಬ್ಬರೇ ತಮ್ಮ ಛೇಂಬರಿನಿಂದ ಎದ್ದು ಹೊರಡುವ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಕಿಶೋರ್ ಕುಳಿತ ಚೇಂಬರ್ ಹತ್ತಿರ ಬಂದ ಅರುಣ್ 'ಏನು ಕುಳಿತೇ ಇದ್ದೀಯಾ ಮನೆಯಲ್ಲಿ ಏನಾದರೂ ಢುಶ್ಂ ಢುಶ್ಂ ಆಗಿದೆಯಾ' ಎಂದು ತನ್ನ ಜೋಕಿಗೆ ತಾನೇ ನಗುತ್ತಾ ಕೇಳಿದ.

ತನ್ನ ಯೋಚನೆಯಲ್ಲಿ ಮೈಮರೆತಿದ್ದ ಕಿಶೋರ್ ಎಚ್ಚೆತ್ತು 'ಏನಿಲ್ಲ ಸ್ವಲ್ಪ ಕೆಲಸವಿತ್ತು, ಹೊರಟೆ' ಎಂದು ತನ್ನ ಟಿಫಿನ್ ಬಾಕ್ಸನ್ನು ಬ್ಯಾಗಿಗೆ ತುಂಬುವಾಗ ಮಧ್ಯಾಹ್ನ ತಾನು ಏನೂ ತಿನ್ನದಿರುವುದು ಗಮನಕ್ಕೆ ಬಂದಿತ್ತು. ಹೊರ ಬಂದ ಕಿಶೋರನನ್ನು ಅವನ ಜೊತೆಗೆ ಬಂದ ಅರುಣ್ ಹೆಗಲ ಮೇಲೆ ಕೈ ಹಾಕಿ 'ಎನಿ ಪ್ರಾಬ್ಲಮ್ ಕಿಶೋರ್' ಎಂದ.

'ಹಾಗೇನಿಲ್ಲ ಸ್ವಲ್ಪ ತಲೆನೋವು. ಜ್ವರದ ಫೀಲಿಂಗ್ ಇದೆ.'

'ಮನೆಗೆ ಹೋಗಿ ಅತ್ತಿಗೆ ಹತ್ತಿರ ಬಿಸಿ ಕಾಫಿ ಮಾಡಿಸಿ ಕುಡಿ. ರೆಸ್ಟ್ ತಗೊ'

ಕಿಶೋರ್ ತನ್ನ ಬೈಕ್ ಸ್ಟಾರ್ಟ್ ಮಾಡಿ ಮನೆಯ ದಾರಿ ಬಿಟ್ಟು ಸಮೀಪದ ಪಾರ್ಕ್‌ಗೆ ಹೋಗಿ ಕುಳಿತ.

ತಾನು ಸಿಕ್ಕಿಕೊಂಡ ಸಂಕಟದಿಂದ ಪಾರಾಗುವ ದಾರಿ ಕಾಣುತ್ತಿಲ್ಲ. ಯಾರನ್ನೂ ಅರ್ಥ ಮಾಡಿಕೊಂಡಿದ್ದೇನೆ ಎಂದುಕೊಳ್ಳುವುದು ಬರೀ ಭ್ರಮೆಯಷ್ಟೆ. ನಿನ್ನೆಯ ತನಕ ತಾನು ಪರಮಸುಖಿ, ವಿದ್ಯಾಳಂತಾ ಮಡದಿ ಸಿಕ್ಕಿರುವುದು ತನ್ನ ಭಾಗ್ಯವೆಂದುಕೊಂಡಿದ್ದ ತನ್ನ ನಂಬಿಕೆಗೆ ಪೆಟ್ಟು ಬಿದ್ದಿದೆ. ಹಣದ ಮುಂದೆ ಯಾವ ಸಂಬಂಧವೂ ಹೆಚ್ಚಾಗದು ಎಂಬ ಮಾತು ತನ್ನ ಸರ್ವಸ್ವವೂ ಆಗಿದ್ದ ವಿದ್ಯಾಳಿಗೂ ಅನ್ವಯಿಸುತ್ತದೆ ಎಂದು ತಿಳಿದಿರದ ಅವನಿಗೆ ದೊಡ್ಡ ಆಘಾತವಾಗಿದೆ.

ಎಷ್ಟು ಖಂಡಿತವಾಗಿ ಹೇಳಿದ್ದಳು.. 'ಯಾರನ್ನು ಕೇಳಿ ಭರವಸೆ ಕೊಟ್ಟಿರಿ? ಹಣ ನಿಮ್ಮದಿರಬಹುದು. ಆದರೆ ಅದರಲ್ಲಿ ನಮ್ಮ ಮಕ್ಕಳ ಭವಿಷ್ಯವಿದೆ. ಅವರ ತಾತನ ಹಣ ಕೇಳುವ ಹಕ್ಕು ನನಗೂ ಇದೆ. ಪೈಸೆಯೂ ಪೋಲಾಗದಂತೆ ಸಂಸಾರ ನಡೆಸಿದ್ದರಿಂದ ಈ ದಿನ ನಾವು ಒಂದು ನೆಲೆ ನಿಂತಿದ್ದೇವೆ. ಮಕ್ಕಳ ಭವಿಷ್ಯದ ಜವಾಬ್ದಾರಿ ತಂದೆಯಾದ ನಿಮ್ಮದೂ ಇದೆ, ನೆನಪಿರಲಿ'.

ಯಾವುದೂ ಅಲ್ಲಗೆಳೆಯುವ ಮಾತಲ್ಲ. ನನ್ನ ಗಳಿಕೆಯನ್ನು ಹಿತಮಿತವಾಗಿ ಖರ್ಚು ಮಾಡಿ ಉಳಿತಾಯ ಮಾಡಿದ್ದಲ್ಲದೆ ಮಕ್ಕಳಿಗೆ ಮನೆ ಪಾಠ ಮಾಡಿ ತಾನು ಗಳಿಸಿದ್ದರಲ್ಲಿ ಸೀರೆ, ಚಿನ್ನ ಏನಕ್ಕೂ ಬಳಸದೆ ಕೂಡಿಟ್ಟಿದ್ದರಿಂದ, ಮನೆಯ ಮಕ್ಕಳ ಜವಾಬ್ದಾರಿ ಅವಳು ನಿಭಾಯಿಸಿದ್ದರಿಂದಲೇ ನಾವೊಂದು ನಮ್ಮದೆಂಬ ಗೂಡು ಕಟ್ಟಿ ನೆಲೆ ನಿಂತಿದ್ದು.

ಕಿಶೋರ್ ಎಷ್ಟು ಬಾರಿ ಹೇಳಿದ್ದನೊ, ನೀನು ಸಿಕ್ಕಿದ್ದು ನನ್ನ ಪುಣ್ಯವೆಂದು. ಊರಿನಲ್ಲಿ ತಮ್ಮ ಪಾಲಿಗೆ ಬಂದ ಹತ್ತು ಲಕ್ಷದಲ್ಲಿ ತಾನೇ ಒತ್ತಾಯಿಸಿದ್ದರೂ ಒಂದು ಪೈಸೆಯೂ ತೆಗೆಯದೆ ಮಕ್ಕಳ ವಿದ್ಯಾಭ್ಯಾಸಕ್ಕೆಂದು ಡಿಪಾಸಿಟ್ ಮಾಡಿ ನನ್ನ ಅಪ್ಪ ಅಮ್ಮನ ಹತ್ತಿರ ಭೇಷ್ ಎನಿಸಿಕೊಂಡಿದ್ದಳು.

ನಾನೂ ಅಷ್ಟು ನಿಷ್ಠುರವಾಗಿ ಹೇಳಬಾರದಿತ್ತು. ಪರಿಸ್ಥಿತಿ ಹಾಗೆ ನುಡಿಸಿತ್ತು. ಸಹನೆ ಕಳೆದುಕೊಂಡ ಮನಸ್ಸು ನಾಲಿಗೆಯ ಹತೋಟಿಯನ್ನೂ ಕಳೆದು ಕೊಂಡಿತ್ತು. ಸ್ವಲ್ಪ ದಿನದ ಮಟ್ಟಿಗೆ ಜೀವದ ಗೆಳೆಯನಿಗೆ ಕೊಡಲು ವಿರೋಧಿಸಿದ್ದು ತನ್ನನ್ನು ಕೆರಳಿಸಿತ್ತು. ಒಂದು ದಿನವೂ ನನ್ನ ನಡೆನುಡಿಯಲ್ಲಿ ಬಾರದ ನಾನು ಎಂಬುದು ಕೋಪಕ್ಕೆ ಸಿಕ್ಕಿ 'ನನ್ನ ಹಣ ನನ್ನ ಇಷ್ಟದಂತೆ ಬಳಸುವ ಅಧಿಕಾರ ನನಗಿದೆ, ಕೇಳುವ ಹಕ್ಕು ನಿನಗಿಲ್ಲ' ಎಂದು ನುಡಿಸಿತ್ತು.

ಅಷ್ಟೇ ತೀಕ್ಷ್ಣವಾಗಿ ಬಿಟ್ಟ ಬಾಣದಂತೆ ಬಂದಿತ್ತು ಅವಳ ಉತ್ತರ. ಮುಂದೇನು? ಗೆಳೆಯನಿಗೆ ಮಾತು ಕೊಟ್ಟಾಗಿತ್ತು. ಅವನಿಗೆ ಹೇಳಬೇಕು, ನಿನಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲಾಗದ ಕೃತಘ್ನ ಗೆಳೆಯ ತಾನೆಂದು.

ಕಿಶೋರ್‌ನಿಗೆ ಶಂಕರ ಸಿಕ್ಕಿದ್ದು ಆಕಸ್ಮಿಕವಾಗಿಯೇ. ಬ್ಯಾಂಕ್ ಕೊಟ್ಟ ಸಾಲ ವಸೂಲಿಗೆ ಮ್ಯಾನೇಜರ್ ಜೊತೆಯಲ್ಲಿ ಹೋದ ಸಂದರ್ಭ. ಅಲ್ಲಿ ಶಂಕರನ ಭೇಟಿ ಆಗಿತ್ತು. ಶಂಕರನೇ ಅವನ ಗುರುತು ಹಿಡಿದು ಮಾತನಾಡಿಸಿದ್ದ.

ಪ್ರೈಮರಿ ಶಾಲೆಯಲ್ಲಿ ಒಟ್ಟಿಗೆ ಓದಿದವರು. ಗೋಲಿ ಆಟದಿಂದ ಕ್ರಿಕೆಟ್ ತನಕ ಒಟ್ಟಿಗೆ ಆಡಿದವರು. ಶಂಕರನ ತಂದೆ ತಾಲ್ಲೂಕು ಆಫೀಸಿನಲ್ಲಿ ಕ್ಲರ್ಕ್ ಆಗಿದ್ದರೆಂದು ಹೇಳಿದ ನೆನಪು. ಎರಡು ವರ್ಷ ಮಾತ್ರ. ಮತ್ತವರಿಗೆ ವರ್ಗವಾಗಿ ಅವನು ಊರು ಬಿಟ್ಟಿದ್ದ.

ಕಿಶೋರ್ ಮತ್ತೆ ಅವನನ್ನು ನೋಡಿದ್ದು ಇಂದೇ. ಗುರುತು ಹಿಡಿದು ಮಾತಾಡಿಸಿದ್ದು ಬಹಳ ಸಂತೋಷ ವಾಗಿತ್ತು. 'ಬಾ ಮನೆಗೆ ಕಿಶೋರ್' ಒತ್ತಾಯಿಸಿ ತನ್ನ ಜೊತೆಯಲ್ಲಿ ಕರೆದುಕೊಂಡು ಬಂದು ವಿದ್ಯಾಳಿಗೆ ಪರಿಚಯಿಸಿದ್ದ. ಅವಳು ಆತ್ಮೀಯವಾಗಿ ಸತ್ಕರಿಸಿದ್ದಳು. ಅವನ ಮನೆ, ಉದ್ಯೋಗ, ಸಂಸಾರ ಎಲ್ಲವನ್ನು ವಿಚಾರಿಸಿದ್ದಳು.

ರೆವೆನ್ಯೂ ಡಿಪಾರ್ಟ್‌ಮೆಂಟಲ್ಲಿ ಇದ್ದೇನೆ. ಮನೆ ವಿದ್ಯಾನಗರಿಯಲ್ಲಿ. ಹೆಂಡತಿ ಅಖಿಲ. ಮಕ್ಕಳಿಲ್ಲ ಎಂದಿದ್ದ. ವಿದ್ಯಾ ಶಂಕರನಿಗೆ 'ಅಖಿಲನನ್ನು ಕರೆದುಕೊಂಡು ಬನ್ನಿ, ನನಗೆ ಇಲ್ಲಿ ಯಾರೂ ಫ್ರೆಂಡ್ಸ್ ಇಲ್ಲದೆ ಬೇಜಾರಾಗಿದೆ' ಎಂದಿದ್ದಳು.

'ಅವಳು ಇಲ್ಲಿಯವಳೇ ಅತ್ತಿಗೆ. ನಿಮಗವಳು ಜೊತೆ